# ದಿನಾಂಕ 02/02/2019ರಂದು ವಾರ್ಡ್ 18ರ ವಾರ್ಡ್ ಕಮಿಟಿಯ ಸಭೆಯ ನಡವಳಿಕೆಗಳು

## ಉಪಸ್ಥಿತರು ಕಮಿಟಿ ಸದಸ್ಯರು ಹಾಗು ಅಧಿಕಾರಿ/ನೌಕರರು

ಶ್ರೀ ಎಂ. ಆನಂದ್ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನಗರ ಪಾಲಿಕೆ ಸದಸ್ಯರು.

ಶ್ರೀ. ನಾಗರಾಜು, ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) ಕಾರ್ಯದರ್ಶಿ.

ಶ್ರೀ ರಮರಾಚಪ್ಪುರೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹೆಬ್ಬಾಳ.

ಶ್ರೀ ರಂಗಣ್ಣ ಸಹಾಯಕ ಅಭಿಯಂತರರು ವಾರ್ಡ್ –18 ಹೆಬ್ಬಾಳ

ಶ್ರೀ ಶಿವಶಂಕರ್ ಎನ್. ವಾರ್ಡ್ ಕಮಿಟಿ ಸದಸ್ಯರು.

ಶ್ರೀ ಶ್ರೀನಿವಾಸ್ ವಾರ್ಡ್ ಕಮಿಟಿ ಸದಸ್ಯರು.

ಶ್ರೀಮತಿ. ಪದ್ಮ ವಾರ್ಡ್ ಕಮಿಟಿ ಸದಸ್ಯರು

ಶ್ರೀಮತಿ. ರೂಪ ವಾರ್ಡ್ ಕಮಿಟಿ ಸದಸ್ಯರು.

ಶ್ರೀಮತಿ ಸಾವಿತ್ರಮ್ಮ, ವಾರ್ಡ್ ಕಮಿಟಿ ಸದಸ್ಯರು.

ಜಲದರ್ಶಿನಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು.

ಅಂಬೇಡ್ಕರ್ ಸಂಘ, ವಾರ್ಡ್ ಕಮಿಟಿ ಸದಸ್ಯರು. ನಾಗಶೆಟ್ಟಿಹಳ್ಳಿ

ಶ್ರೀ ಎನ್. ಪ್ರಶಾಂತ್ ವಾರ್ಡ್ ಕಮಿಟಿ ಸದಸ್ಯರು.

ಶ್ರೀ ಇಂದ್ರಹಾಸ್ ವಾರ್ಡ್ ಕಮಿಟಿ ಸದಸ್ಯರು.

ಶ್ರೀ ಶಿವಣ್ಣ ಜೆಆರ್ ವಾರ್ಡ್ ಕಮಿಟಿ ಸದಸ್ಯರು.

ಪ್ರಾರಂಭಿಕವಾಗಿ ಸಭೆಯನ್ನು ಉದ್ದೇಶಿಸಿ ಸಹಾಯಕ ಕಂದಾಯ ಅಧಿಕಾರಿ(ಹೆಬ್ಬಾಳ)ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರು, ಕಮಿಟಿ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರು, ಸದಸ್ಯರು, ಕಮಿಟಿ ಸದಸ್ಯರ ಮತ್ತು ಅಧಿಕಾರಿ ನೌಕರರುಗಳ ಸ್ವ–ಪರಿಚಯ ಮಾಡಿಕೊಡಲಾಯಿತು.

ವಾರ್ಡಿನ ಅಧ್ಯಕ್ಷರು ಮಾತನಾಡುತ್ತಾ, ಮೊದಲಿಗೆ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ವಿಷಯಗಳ ಈ ಕೆಳಗಿನ ಅಂಶಗಳ ಬಗ್ಗೆ ಚರ್ಚಿಸಲಾಯಿತು.

- ಮೊದಲಿಗೆ ಗೇಲ್ ಗ್ಯಾಸ್ ಕಂಪನಿ ರವರಿಗೆ ಮತ್ತೊಮ್ಮೆ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ರಸ್ತೆಗಳನ್ನು ಹಗೆಯುತ್ತಿದ್ದು ಜಲ್ಲಿ ಹಾಗೂ ಡಾಂಬರು ಹಾಕದೇ ಹೋಗುತ್ತಿರುವುದು ಕಂಡುಬಂದಿದ್ದು ಎಲ್ಲಾ ರಸ್ತೆಗಳಿಗೆ ಹಗೆಯುವ ಸಂದರ್ಭದಲ್ಲಿ ಜಲ್ಲಿ ಹಾಗೂ ಡಾಂಬರು ಹಾಕಲು ಗೇಲ್ ಸಂಸ್ಥೆಯವರಿಗೆ ಮಾನ್ಯ ಅಧ್ಯಕ್ಷರು ತಿಳಿಸಿದರು.
- ವಾರ್ಡ್‌ನ ವೆಲ್‌ಫೇರ್ ಅಸೋಸಿಯೇಷನ್ ಸದಸ್ಯರಾದ ಶ್ರೀ ವಿಜ್ಞಾನ ಗೌಡರು ಮಾತನಾಡಿ (footpath encroachment) ತರಕಾರಿ ಅಂಗಡಿಗಳನ್ನು ತೆರವುಗೊಳಿಸಲು ಸೂಚಿಸಿದಾಗ ಮಾನ್ಯ ಅಧ್ಯಕ್ಷರು ಆದಷ್ಟು ಬೇಗನೇ ತೆರವುಗೊಳಿಸುವುದಾಗಿ ಭರವಸೆ ನೀಡಿದರು.
- ವಾರ್ಡ್‌ನ ಹೆಚ್. ಐ. ಜಿ ಕಾಲೋನಿ ನಿವಾಸಿಯಾದ ಶ್ರೀ. ಸುಧಾರಾಜ್ ರವರು ಮಾತನಾಡಿ 14, 15ನೇ ಅಡ್ಡ ರಸ್ತೆ ಹಾಗೂ ಆರ್.ಎಂ. ವಿ ಕ್ಲಬ್ ಪಕ್ಕದ ರಸ್ತೆಗಳಲ್ಲಿ ಡ್ರೈನೇಜ್ ಮೋರಿ ಕೆಲಸ ಸ್ವಚ್ಛತೆ ಕಾಮಗಾರಿ ಮಾಡಿಸಲು ಮಾನ್ಯ ಅಧ್ಯಕ್ಷರನ್ನು ಕೇಳಿದಾಗ ಆದಷ್ಟು ತ್ವರಿತವಾಗಿ ಕೆಲಸ ಮಾಡಿಸುವುದಾಗಿ ತಿಳಿಸಿದರು.
- ವಾರ್ಡ್‌ನಲ್ಲಿ ಎಲ್ಲ ರಸ್ತೆಗಳನ್ನು Streetlight ತೆರವುಗೊಳಿಸಿ, L.E.D Blub ಗಳನ್ನು ಹೊಸದಾಗಿ ಅಳವಡಿಸಲು ಹಾಗೂ ಮರದ ಕೊಂಬೆಗಳನ್ನು ವಿದ್ಯುತ್ ಇಲಾಖೆಯವರು ತೆರವುಗೊಳಿಸಬೇಕೆ ಅಥವಾ ಅಬಕಾರಿ ಇಲಾಖೆಯವರು ತೆರವುಗೊಳಿಸಬೇಕೆ ಎಂದು ವೆಲ್‌ಫೇರ್ ಅಸೋಸಿಯೇಷನ್ ಸದಸ್ಯರಾದ ಶ್ರೀ ವಿಜ್ಞಾನ ಗೌಡರು ಕೇಳಿದಾಗ ಮಾನ್ಯ ಅಧ್ಯಕ್ಷರು ವಿದ್ಯುತ್ ಇಲಾಖೆಯವರೇ ಮರಗಳನ್ನು ತೆರವುಗೊಳಿಸಬೇಕೆಂದು ತಿಳಿಸಿದರು.
- ವಿಸ್ಪರಿಂಗ್ ಅಪಾರ್ಟ್‌ಮೆಂಟ್ ಹತ್ತಿರ ಖಾಲಿ ಜಾಗದಲ್ಲಿ ಗಿಡಗಳನ್ನು ನೆಟ್ಟು ಪಾರ್ಕ್ ಮಾಡಲು ಆದಷ್ಟು ಬೇಗ ಟೆಂಡರ್ ಕರೆದು ಕಾಮಗಾರಿ ಕೈಗೆತ್ತಿಕೊಳ್ಳಲು ವಾರ್ಡ್ ಕಮಿಟಿ ಅಧ್ಯಕ್ಷರು ಸಹಾಯಕ ಅಭಿಯಂತರರು ಶ್ರೀ. ಈರಣ್ಣ ರವರಿಗೆ ಹೇಳಿದರು.
- BWSSB ಇಲಾಖೆಯವರಿಗೆ ಗೆದ್ದಲಹಳ್ಳಿ ಓಂ ಶಕ್ತಿ ದೇವಸ್ಥಾನ ಹತ್ತಿರ ಅಲ್ಲಿಯೇ ಬಿಟ್ಟಿರುವ Bore well Motor pipe ಗಳನ್ನು ಕೂಡಲೇ ವಾರ್ಡ್ ಕಛೇರಿ ಹತ್ತಿರ ತಂದು ಹಾಕಲು ಹಾಗೂ Alternate Motor ಇಡಲು ಮಾನ್ಯ ಅಧ್ಯಕ್ಷರು BWSSB ಇಲಾಖೆಯವರಿಗೆ ತಿಳಿಸಿದರು.
- ವಾರ್ಡ್ ನ 1ನೇ ಹಾಗೂ 7ನೇ ಮುಖ್ಯ ರಸ್ತೆ ಡಾಲರ್ಸ್ ಕಾಲೋನಿಯಲ್ಲಿ Sampoorna Provision Store ಹತ್ತಿರ ಬೇರೆ ಕಡೆಯಿಂದ ಬಂದು ಕಸ ಬಿಸಾಕುತ್ತಿರುವುದು ಕಂಡುಬಂದಿದ್ದು, ಹಾಗೂ ಅಲ್ಲಿ ವಾಸವಿರುವ Bachelors ರಾತ್ರಿ ವೇಳೆಯಲ್ಲಿ ಕಸ ಬಿಸಾಕುತ್ತಿರುವುದು ಕಂಡುಬಂದಿದ್ದು,ಆದಷ್ಟು ಬೇಗ ವಾರ್ಡ್ Marshal ಗಳನ್ನು ಬಿಡಲು ಮಾನ್ಯ ಅಧ್ಯಕ್ಷರು ತಿಳಿಸಿದರು.

* ವಾರ್ಡ್‌ನಲ್ಲಿ ಒಂಟಿ ಮನೆ ನಿರ್ಮಾಣಕ್ಕಾಗಿ 2016-17, 2017-18 ಹಾಗೂ 2018-19ನೇ ಸಾಲಿನ 80 ಮನೆಗಳ ನಿರ್ಮಾಣಕ್ಕಾಗಿ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದು ಆದಷ್ಟು ಬೇಗ Job code ಅನುಮೋದನೆ ಪಡೆಯಲು ಸಭೆಯಲ್ಲಿ ಮಾನ್ಯ ಅಧ್ಯಕ್ಷರು ತಿಳಿಸಿದರು.

* Jio Company ರವರು ಮಾನ್ಯ ಸದ್ಯಸರ ಅನುಮತಿ ಪಡೆದುಕೊಳ್ಳದೇ ರಸ್ತೆ ಹಗೆದಿದ್ದು , ಮಾನ್ಯ ಅಧ್ಯಕ್ಷರು ಅಸಮಾದಾನ ವ್ಯಕ್ತಪಡಿಸಿದ್ದು,. ಇನ್ನು ಮುಂದೆ ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಕಾಮಕಾರಿ ಕೈಗೊಳ್ಳಲು ತಿಳಿಸಿದರು.

* ಕಲ್ಯಾಣ ಇಲಾಖೆ ವತಿಯಿಂದ Tailoring ತರಬೇತಿ ಪಡೆದವರನ್ನು ಗುರಿತಿಸಿ 50 ಜನರನ್ನು ಆಯ್ಕೆ ಮಾಡಿ Tailoring Machineಗಳನ್ನು ವಿತರಿಸಲು ಕಲ್ಯಾಣ ಇಲಾಖೆಯಿಂದ ಬಂದಿರುವ ಶ್ರೀಮತಿ. ಮಂಜುಳಾ Tailoring Teacher ರವರಿಗೆ ತಿಳಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳು ಕಾರ್ಯರೂಪಕ್ಕೆ ಬಂದಿರುವ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲು ಹಾಗೂ ಈ ಸಭೆಯಲ್ಲಿ ಏನೂ ನಿರ್ಣಯಗಳು ಇಲ್ಲದಿರುವುದರಿಂದ ಸದರಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

2/2

ಸಹಾಯಕ ಕಂದಾಯ ಅಧಿಕಾರಿ ಹಾಗೂ
ವಾರ್ಡ್ ಕಮಿಟಿ ಕಾರ್ಯದರ್ಶಿ (18)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು(ಪೂರ್ವ)ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು(ಪೂರ್ವ)ರವರ ಅವಗಾಹನೆಗೆ ಸಲ್ಲಿಸಿದೆ.
5. ಕಂದಾಯ ಅಧಿಕಾರಿ(ಹೆಬ್ಬಾಳ)ರವರ ಅವಗಾಹನೆಗೆ.
6. ಕಂದಾಯ ಪರಿವೀಕ್ಷಕರು/ಮೌಲ್ಯ ಮಾಪಕರು ವಾರ್ಡ್–27.